ಶ್ರೀ ಎಸ್. ಗೋಪಾಲಗೌಡ.—ನೋಟೀಸ್ ಕೊಟ್ಟಿದ್ದಾರೆಂದು ಹೇಳಿದ್ದೀರಿ. ಈಗ ಕೊಟ್ಟಿರತಕ್ಕ ನೋಟೀಸಿನಲ್ಲಿ ಅವರು ಏನು ಹೇಳಿದ್ದಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—Resolution ಪಾಸ್ ಮಾಡಿದಾರೆಂದು ತಿಳಿಸಿದ್ದೇವೆಯೇ ಹೊರತು ನೋಟೀಸ್ ಕೊಟ್ಟಿದ್ದಾರೆಂದು ಹೇಳಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈಗ Resolutionನ್ನಿನ copy ತಮಗೆ ತಲಪಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಲಪಿದೆ.

ಶ್ರೀ ಎಸ್. ಗೋಪಾಲಗೌಡ.—ಏನು ಹೇಳಿದ್ದಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವು ವಿಷಯಗಳನ್ನು ಪ್ರಸ್ತಾಪಮಾಡಿ ಹೇಳಿದ್ದಾರೆ. ಬೇಕಾದರೆ ತಮಗೆ ಅದರ ಪ್ರತಿಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ. ಈ ಇಲಾಖೆಯಲ್ಲಿ ಮುಖ್ಯವಾಗಿ ಸಂಬಳ ಸಾರಿಗೆಗಳನ್ನು ಪರಿಶೀಲನೆ ಮಾಡತಕ್ಕ ವಿಷಯದಲ್ಲಿ, ಆ ಒಂದು ಡಿಮ್ಯಾಂಡನ್ನು ಬಿಟ್ಟು ಬೇರೆ ಡಿಮ್ಯಾಂಡ್‌ಗಳನ್ನೆಲ್ಲಾ ಅಂಗೀಕರಿಸಿದ್ದೇವೆಂದು ಹೇಳಿದ್ದೀರಿ. . . .

ಶ್ರೀ ಎಚ್. ಎಂ. ಚನ್ನಬಸಪ್ಪ:—ಡಿಮ್ಯಾಂಡ್‌ಗಳನ್ನಲ್ಲ; ಶಿಫಾರಸುಗಳನ್ನು ಅಂಗೀಕರಿಸಿದ್ದೇವೆ.

ಶ್ರೀ ಎಸ್. ಗೋಪಾಲಗೌಡ. ಸಂಬಳಕ್ಕೆ ಸಂಬಂಧಪಟ್ಟ ಶಿಫಾರಸುಗಳನ್ನು ಯಾವಾಗ ಪರಿಶೀಲನೆ ಮಾಡುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಗೀಕರಿಸಿಲ್ಲವೆಂದು ಹೇಳಿದ್ದೇವೆಯೇ ಹೊರತು ಯಾವಾಗ ಪರಿಶೀಲನುತ್ತೇವೆಂದು ಹೇಳುವುದಕ್ಕಾಗುವುದಿಲ್ಲ.

Sri D. VENKATESH.—May I know whether the strike was legal or illegal?

Sri H. M. CHANNABASAPPA.—I would like to have notice for that.

Bhadra Reservoir Project Area (I.V.C. Roads).

Q.—11. Sri B. MADHAVACHAR (Bhadravati).—

Will the Government be pleased to state:—

(a) the amount provided for formation of I.V.C. roads in the Atchkat area of Bhadra Reservoir Project;

(b) the amount spent so far for improving or forming roads from the Budget of Bhadra Reservoir Project?

A.—Sri H. M. CHANNABASAPPA (Minister for Industries).—

(a) The question of making provision is still under examination.

(b) Nil.

ಶ್ರೀ ಬಿ. ಮಾಧವಾಚಾರ್.—ಭದ್ರಾವತಿ ಜಲಾಶಯ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ಗ್ರಾಮಾಂತರ ರಸ್ತೆಗಳನ್ನು ನಿರ್ಮಾಣ ಮಾಡಲು ಅಥವಾ ಅವುಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಏನಾದರೂ estimate ಬಂದಿದೆಯೇ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಹೆಂದೆ ಭದ್ರಾ ಡೆವಲಪ್‌ಮೆಂಟ್ ಕಮಿಟಿಯವರು ಒಂದು ಅಂದಾಜು ಮಾಡಿದ್ದಾರೆ.

ಶ್ರೀ ಬಿ. ಮಾಧವಾಚಾರ್.—ಎಷ್ಟು ಅಂದಾಜು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಕೋಟಿ 1 ಸಾವಿರ ರೂಪಾಯಿಗಳು.

ಶ್ರೀ ಬಿ. ಮಾಧವಾಚಾರ್.—ಅದನ್ನು ಯಾವಾಗ ಮಂಜೂರು ಮಾಡುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಭದ್ರಾ ಚಾನಲ್ ಏರಿಯಾ ಡೆವಲಪ್ ಆದ ಮೇಲೆ ಆ ವಿಷಯವನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಬಿ. ಮಾಧವಾಚಾರ್.—1956ನೇ ಜೂನ್ 1ರಲ್ಲಿ ನೀರು ಬರುತ್ತದೋ?

ಶ್ರೀ ಎಚ್. ಎಂ. ಚನ್ನಬಸಪ್ಪ.—Left bank ಚಾನಲ್ಲಿಗೆ ಮಾತ್ರ ಬರುತ್ತದೆ. ಆದರೆ right bank ಚಾನಲ್ಲಿಗೆ ಒಂದೆರಡು ವರ್ಷಗಳಾಗಬಹುದು. Area develop ಆದ ಮೇಲೆ inter-village communication ವಿಚಾರ.

ಶ್ರೀ ಬಿ. ಮಾಧವಾಚಾರ್.—ಎಡ ಭಾಗದ ಚಾನಲ್‌ನಿಂದ ಅದಷ್ಟು ಬೇಗ ರಸ್ತೆಯನ್ನು ಮಂಜೂರು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಬ್ಬು ಬೆಳೆಯುವುದರಿಂದ ಸಕ್ಕರೆ ಕಾರ್ಖಾನೆ ಆದ ಮೇಲೆ sugar cess ಬರುತ್ತದೆ; ಅದನ್ನು ಉಪಯೋಗಿಸಿಕೊಂಡು ಆ ರಸ್ತೆಯನ್ನು ಕೊಡತಕ್ಕ ವಿಷಯವನ್ನು ಆಲೋಚನೆ ಮಾಡುತ್ತೇವೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಅಚ್ಚುಕಟ್ಟಿನಲ್ಲಿ ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಗದ್ದೆ ಯಾಗುತ್ತದೆ ಎಂದು ಗೊತ್ತಿರುವುದರಿಂದ ಗದ್ದೆ ಯಾಗುವುದಕ್ಕೆ ಪೂರ್ವ ಭಾವಿಯಾಗಿ ರಸ್ತೆಗಳನ್ನು ವ್ಯವಸಾಯಕ್ಕೆ ಅನುಕೂಲವಾಗುವಂತೆ ಮಾಡುವುದಕ್ಕೆ ನೂಕ್ತ ದಾರಿ ಇಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಅಭಿಪ್ರಾಯದ ಮಾತು. ನದ್ಯದಲ್ಲಿ ಇರ್ರಿಗೇಷ್ ಡೆವಲಪ್‌ಮೆಂಟ್ ಆದ ಹಾಗೆ ಎಲ್ಲೆಲ್ಲಿ ಯಾವ ಯಾವ ರಸ್ತೆಗಳು ಆಗಬೇಕೋ, ಬಾಟಾ ಮಾರ್ಗಗಳು ಆಗಬೇಕೋ ಅಲ್ಲಲ್ಲಿ ರಸ್ತೆಗಳನ್ನು ಏರ್ಪಾಡು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಭೀಮಪ್ಪನಾಯಕ್.—ಡೆವಲಪ್‌ಮೆಂಟ್ ಆಗಬೇಕಾದರೆ ರಸ್ತೆಗಳು ಆಗಬೇಕು. ರಸ್ತೆಗಳಾಗದೆ ಡೆವಲಪ್‌ಮೆಂಟ್ ಆಗುವುದಿಲ್ಲ ಎಂದು ಹೇಳುವ ಹಾಗಾಯಿತು.

ಶ್ರೀ ಎಚ್. ಎಂ. ಚನ್ನಬಸಪ್ಪ.—Irrigation Development ಆದ ಮೇಲೆ ಅದನ್ನು ಪರ್ಯಾಲೋಚನೆ ಮಾಡೋಣ.

ಶ್ರೀ ಎ. ಭೀಮಪ್ಪನಾಯಕ್.—Irrigation develop ಆಗಬೇಕಾದರೆ ಬೇಸಾಯ ಮಾಡಲು ಹೋಗುವುದಕ್ಕೆ ರಸ್ತೆ ಬೇಡವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಆ ಮೇಲೆ ಪರಿಶೀಲನೆ ಮಾಡೋಣ.

ಶ್ರೀ ಎ. ಭೀಮಪ್ಪನಾಯಕ್.—ಮುಂಚೆಯೇ ಮಾಡಿರಿ ಎಂದು ಕೇಳಿದರೆ, ನಿಮ್ಮಿಂದ ದುಡ್ಡು ಬಂದ ಮೇಲೆ ಮಾಡುತ್ತೇವೆ ಎಂದರೆ ಏನು ಅರ್ಥ?

ಶ್ರೀ ಎಚ್. ಎಂ. ಚನ್ನಬಸಪ್ಪ.—Irrigation development ಆದ ಮೇಲೆ ಪ್ರಯತ್ನ ಮಾಡೋಣ ಎಂದು ಹೇಳಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—56ನೆ ಸಾಲಿಗೆ ನೀರು ಬರುತ್ತದೆ ಎಂದು ತಿಳಿದುಕೊಂಡು, ರಸ್ತೆ ಮಾಡದೇ ಇದ್ದರೆ, ಬೇಸಾಯ ಹೇಗೆ ಮಾಡುವುದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವು ಸಣ್ಣ ಪುಟ್ಟ ರಸ್ತೆಗಳಿಗೆ ಭದ್ರಾ ಚಾನಲ್ ಪ್ರಾಜೆಕ್ಟಿನಿಂದ provide ಮಾಡಿದ್ದೇವೆ. ಸಣ್ಣ ಪುಟ್ಟ ರಸ್ತೆಗಳನ್ನು ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಳ್ಳಿಗಳಿಂದ ಹಳ್ಳಿಗಳಿಗೆ ಹೋಗುವ ರಸ್ತೆಗಳು ತಾನೇ ಇಲ್ಲರುವುದು? ಬಾಟಾ ಮಾರ್ಗಗಳು ಎಲ್ಲಿಂದ ಬಂತು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಳ್ಳಿಯಿಂದ ಹಳ್ಳಿಗಳಿಗೆ ಹೋಗುವುದಕ್ಕೆ Inter-Village-Communication ರಸ್ತೆಗಳು ಎಂದು ಹೇಳುತ್ತಾರೆ. ಈ surface road ಗಳಿಗೆ ಭದ್ರಾ ಚಾನಲ್ ಪ್ರಾಜೆಕ್ಟಿನ Left bank channel ಅಂದಾಜಿನಲ್ಲಿ ಸ್ವಲ್ಪ ಹಣ ಒದಗಿಸಿದ್ದಾರೆ ಎಂದು ವರದಿ ಬಂದಿದೆ. ಕೆಲಸಮಾಡುತ್ತಿದ್ದಾರೆ. Inter-village ಬಾಟಾ ಮಾರ್ಗಗಳನ್ನು irrigation development ಆದ ಮೇಲೆ ಮಾಡೋಣ.

Welfare Officers, Bangalore Woollen, Cotton and Silk Mills, Ltd., Bangalore.

Q.—209. Sri D. VENKATESH (Gandhinagar).—

Will the Government be pleased to state :—

(*a*) the number and the names of the Welfare Officers in the Bangalore Woollen, Cotton and Silk Mills, Ltd., Bangalore ;

(*b*) whether they are treated with appropriate status corresponding to the status of the Departmental Heads in the said Mills ?

A.—Sri A. G. RAMACHANDRA RAO (Minister for Law and Education).—

(*a*) Four.

1 Sri B. V. Acharya, B.A.
2 ,, G. Parthasarathy, B.A., D.S.S.A.
3 ,, P. Venkataseshiah, B.A., D.L.W.
4 ,, R. M. Birjay, B.A., D.S.S.A.

(*b*) Yes.

Sri D. VENKATESH.—The status of the Welfare Officers is not maintained so that it may be equal to that of departmental heads in regard to salary and other things. Will you kindly examine it ?

*Sri A. G. RAMACHANDRA RAO.—Yes.

QUESTIONS FOR ANSWERS ON THE DAY

(but not taken up).

Grants to Districts (P.W.D.)

Q.—21. Sri B. N. BORANNA GOWDA (Belur).—

Will the Government be pleased to state :—

the amount of grants given to the districts ; in the year 1955-56 for A.R. Grants (each district list should be furnished separately) ?

A.—Sri H. M. CHANNABASAPPA (Minister for Industries).—

The A. R. grants are as follows.—

	A. R. of roads	*Buildings.*
Mysore ...	5,60,043	3,26,300
Mandya ...	4,49,288	32,800
Hassan ...	3,05,312	75,400
Chikmagalur ...	4,67,450	51,375
Shimoga ...	5,54,263	87,375
Chitaldrug ...	3,81,363	49,750
Tumkur ...	3,81,143	75,600
Kolar ...	3,34,732	75,600
Bangalore ...	3,16,300	2,91,800
Bellary ...	8,32,600	36,000

N.B.—The figures in the case of the buildings include both A.R. and S.R. as no separate allotments are being made for A.R. only of buildings.

Amildars (with particular reference to Bellary District).

Q.—72. Sri K. KOTRA BASAVANA GOUD (Kudligi).—

Will the Government be pleased to state :—

(*a*) the number of vacancies of Amildars in the State that have been filled up in 1955-1956 ;

(*b*) why the Tahsildars of Bellary District are not confirmed ;

(*c*) the number of First Division Clerks in the State who have been promoted as Amildars since 1st October 1953 ;

(*d*) what is the representation from Bellary District ?